ಪ್ರದೇಶಗಳಲ್ಲಿ, ಕುಡಿಯುವ ನೀರಿನ ಸರಬರಾಜಿಗೂ ಹಣ ಬಿಡುಗಡೆ ಮಾಡಲಾಗಿದೆ. ಇವೆಲ್ಲವುಗಳಿಗೆ ಪ್ರಸ್ತುತ ವರ್ಷ ಬಿಡುಗಡೆಯಾದ ಹಣದ ವಿವರ ಈ ಕೆಳಕಂಡಂತಿದೆ.

ಕುಡಿಯುವ ನೀರಿನ ಸರಬರಾಜಿಗಾಗಿ		(ಲಕ್ಷ ರೂ.) ರೈತರಿಗೆ ಕೃಷಿ ಸಾಮಗ್ರಿಗಳನ್ನೊಳಗೊಂಡ ಚೀಲಗಳ ಸರಬರಾಜಿಗಾಗಿ
ಗ್ರಾಮಾಂತರ	ಪಟ್ಟಣ	
೧೩.೦೦	೧೫.೦೦	೮.೦೦

ಅ) ಯಾವ ಒಂದು ಪ್ರದೇಶವನ್ನು ಸರ್ಕಾರವು ಬರಪೀಡಿತ ಎಂದು ಘೋಷಿಸುವುದಿಲ್ಲ. ದಕ್ಷಿಣ ಕನ್ನಡ ಜಿಲ್ಲೆಯ ರೈತರಿಗೆ ಪರಿಹಾರ ಒದಗಿಸಿರುವ ಬಗ್ಗೆ ಮೇಲಿನ 'ಅ'ದಲ್ಲಿ ಈಗಾಗಲೇ ವಿವರಣೆ ನೀಡಲಾಗಿದೆ.

ಪುನರ್ ವಸತಿ

೧೯೭. ಶ್ರೀ ಪ್ರತಾಪ ಚಂದ್ರಶೆಟ್ಟಿ (ಕುಂದಾಪುರ).—ಮಾನ್ಯ ಕಂದಾಯ ಮತ್ತು ಯೋಜನಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಕಾರವಾರದ "ಸಿಬರ್ಡ್" ನೌಕಾನೆಲೆಯಿಂದಾಗಿ ನಿರಾಶ್ರಿತರಾದವರ ಪುನರ್ ವಸತಿ ಕಾರ್ಯಗಳಿಗಾಗಿ ಕೇಂದ್ರ ಸರ್ಕಾರವು ನೀಡಿರುವ ಅನುದಾನದ ಮೊತ್ತವೆಷ್ಟು ?

ಆ) ಈ ನೌಕಾನೆಲೆಗಾಗಿ ಬೇಕಾಗಿರುವ ಜಮೀನಿನ ವಿಸ್ತೀರ್ಣವೆಷ್ಟು ?

ಇ) ನಿರಾಶ್ರಿತರ ಪುನರ್ ವಸತಿಗಾಗಿ ರಾಜ್ಯ ಸರ್ಕಾರದವರು ಕೈಗೊಂಡ ಕ್ರಮಗಳೇನು ?

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ ಮತ್ತು ಯೋಜನಾ ಮಂತ್ರಿಗಳು):—

ಅ) ಕೇಂದ್ರ ಸರ್ಕಾರವು ಸ್ಥಳಾಂತರಗೊಳ್ಳುವ ಜನರ ಪುನರ್ವಸತಿಯನ್ನು ಕಲ್ಪಿಸುವ ಸಲುವಾಗಿ ಅಂದಾಜು ವೆಚ್ಚವಾದ ರೂ. ೭.೦೪ ಕೋಟಿ ಹಣವನ್ನು ಬಿಡುಗಡೆ ಮಾಡಿದ್ದಾರೆ.

		ಎ–	ಗು–ಸೆ
ಆ)	೧) ಖಾಸಗಿ ಜಮೀನು	೨೪೬೩–	೩೪–೦೫
	೨) ಅರಣ್ಯ ಜಮೀನು	೫೫೭೫–	೦–೦
	೩) ಸರಕಾರಿ ಪಡ ಜಮೀನು	೪೪–	೨೬–೪೫
	೪) ಬಂದರ ಇಲಾಖೆಯ ಜಮೀನು	೫೦–	೩೩–೨೫

ಇ) ಮಾನ್ಯ ಕೃಷಿ ಮಂತ್ರಿಗಳ ಅಧ್ಯಕ್ಷತೆಯಲ್ಲಿ ಒಂದು ಪುನರ್‌ವಸತಿ ಸಮಿತಿಯನ್ನು ರಚಿಸಲಾಗಿದೆ. ಈ ಸಮಿತಿಯ ಶಿಫಾರಸ್ಸುಗಳು ಸರಕಾರದ ಪರಿಶೀಲನೆಯಲ್ಲಿದೆ.

ಸಮಾಜ ಕಲ್ಯಾಣ ಇಲಾಖೆಯಲ್ಲಿನ ಯೋಜನೆಗಳ ಬಗ್ಗೆ.

೨೩೫. ಶ್ರೀ ಗೋಪಾಲ ಮುಕುಂದ ಕಾನಡೆ (ಕಿರ್ಸಿ).—ಮಾನ್ಯ ಸಮಾಜ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ?

ಅ) ಸಮಾಜ ಕಲ್ಯಾಣ ಇಲಾಖೆಯಲ್ಲಿ ಸಾಮಾಜಿಕ ಅಭಿವೃದ್ಧಿ ಕಾರ್ಯಗಳಿಗಾಗಿ ಹಮ್ಮಿಕೊಂಡ ಯೋಜನೆಗಳಾವುವು.

ಆ) ಸದರಿ ಯೋಜನೆಗಳಿಗಾಗಿ ಸರ್ಕಾರದವರು ಒದಗಿಸಿರುವ ಹಣ ವೆಷ್ಟು (ಯೋಜನಾವಾರು ವಿವರ ಒದಗಿಸುವುದು)

ಇ) ೧೯೮೬—೮೭ನೇ ಸಾಲಿನ ಪ್ರತಿ ತಿಂಗಳಿಗೆ ಸದರಿ ಯೋಜನೆಗಳಲ್ಲಿ ಖರ್ಚಾದ ಹಣವೆಷ್ಟು ಹಾಗೂ ಖರ್ಚಾಗದೇ ಉಳಿದಿರುವ ಹಣವೆಷ್ಟು ;

ಈ) ಈ ಯೋಜನೆಗಳಿಗೆ ಕೇಂದ್ರ ಸರ್ಕಾರದವರು ಹಾಗೂ ರಾಜ್ಯ ಸರ್ಕಾರದವರು ಒದಗಿಸಿದ ಹಣದ ವಿವರ ಒದಗಿಸುವುದು?

ಶ್ರೀ ಜಿ. ಬಸವಣ್ಣಪ್ಪ (ಸಮಾಜ ಕಲ್ಯಾಣ ಮಂತ್ರಿಗಳು).—

ಅ) ೬೨ ಯೋಜನೆಗಳ ಪಟ್ಟಿಯನ್ನು ಲಗತ್ತಿಸಿದೆ.

ಆ) ೪೩೮.೩೪ ಲಕ್ಷ ರೂ.ಗಳು ಯೋಜನಾವಾರು ಪಟ್ಟಿ ಲಗತ್ತಿಸಿದೆ.

ಇ) ಏಪ್ರಿಲ್ ೧೯೮೬ ರಿಂದ ಮಾರ್ಚ್ ೧೯೮೭ರವರೆಗೆ ಕಾರ್ಯಕ್ರಮ ಮತ್ತು ಪ್ರಗತಿಯ ಪಟ್ಟಿಯನ್ನು ಲಗತ್ತಿಸಿದೆ.

ಈ) ೧೯೮೬—೮೭ನೇ ಸಾಲಿನಲ್ಲಿ ೫೫೫.೦೮ ಲಕ್ಷ ರೂ.ಗಳ ಯೋಜನಾ ವೆಚ್ಚದಲ್ಲಿ ೩೦.೪೩ ಲಕ್ಷ ರೂ.ಗಳು ಕೇಂದ್ರ ಪುರಸ್ಕೃತ ಕಾರ್ಯಕ್ರಮ ಮತ್ತು ಕೇಂದ್ರ ವಲಯ ಯೋಜನೆಗಳಿಗೆ ಬಿಡುಗಡೆಯಾಗಿರುತ್ತದೆ.

ಹೆಚ್. ಡಿ. ಕೋಟೆ ತಾಲ್ಲೂಕಿನಲ್ಲಿ ಬೆಳೆ ಪರಿಸ್ಥಿತಿ.

೫೦೩. ಶ್ರೀ ಎಂ. ಶಿವಣ್ಣ (ಹೆಗ್ಗಡ ದೇವನ ಕೋಟೆ).—ಮಾನ್ಯ ಕಂದಾಯ ಮತ್ತು ಯೋಜನಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಹೆಚ್.ಡಿ. ಕೋಟೆ ತಾಲೂಕಿನಲ್ಲಿ ಬಿತ್ತನೆ ಮಾಡಬಹುದಾದ ಪ್ರದೇಶದ ವಿಸ್ತೀರ್ಣವೆಷ್ಟು, ಆ ಪೈಕಿ ಈ ವರ್ಷ ಬಿತ್ತನೆ ಮಾಡಿದ್ದ ಪ್ರದೇಶದ ವಿಸ್ತೀರ್ಣವೆಷ್ಟು, ಸದರಿ ಪ್ರದೇಶದಲ್ಲಿ ಯಾವ ಬೆಳೆ ಯಾವ ವರ್ಷಕ್ಕೆ ಬಂದಿದೆ.

ಆ) ಮಳೆ ಇಲ್ಲದೆ ಬೆಳೆನಾಶವಾಗದು, ಈಬೆಳೆ ಪರಿಹಾರಕ್ಕಾಗಿ ಸರ್ಕಾರವು ಮೂಡಿಸಿರುವ ಕಾರ್ಯಕ್ರಮಗಳೇನು.

ಇ) ಹಾಗಿದ್ದಲ್ಲಿ, ಈ ಬಗ್ಗೆ ಎತ್ತುಗಳು ಮತ್ತು ಹಣವನ್ನು ಪಡೆದ ಗಿರಿಜನರ ಸಂಖ್ಯೆ ಎಷ್ಟು?

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ ಮತ್ತು ಯೋಜನಾ ಮಂತ್ರಿಗಳು).—

ಅ) ಹೆಚ್. ಡಿ. ಕೋಟೆ ತಾಲೂಕಿನಲ್ಲಿ ಬಿತ್ತನೆ ಮಾಡಬಹುದಾದ ಪ್ರದೇಶದ ವಿಸ್ತೀರ್ಣ ೬೨,೨೪೩ ಹೆಕ್ಟೇರ್ಸ್. ಈ ವರ್ಷ ಬಿತ್ತನೆ ಮಾಡಿದ್ದ ಪ್ರದೇಶದ ವಿಸ್ತೀರ್ಣ ೪೬,೯೧೦ ಹೆಕ್ಟೇರ್ಸ್. ಬಿತ್ತನೆ ಮಾಡಿದ ಬೆಳೆಗಳು ಮತ್ತು ಅವುಗಳ ವರ್ಷ ಈ ಕೆಳಕಂಡಂತಿದೆ.

೧. ರಾಗಿ—ಕೊಯಿಲು ಮುಗಿದಿದ್ದು ಅತಿ ಸ್ವಲ್ಪ ಬೆಳೆಯಾಗಿರುತ್ತದೆ.

೨. ನಿಧಾನವಾಗಿ ನಾಟಿ ಮಾಡಲಾದ ರಾಗಿ, ಒಣಗಿ ಹೋಗುತ್ತಿದೆ

೩. ಹತ್ತಿ, ಕಾಂಡ ಒಡೆಯುತ್ತಿದ್ದು ವರ್ಷದಲ್ಲಿ ಒಣಗಿಹೋಗುತ್ತಿದೆ.

೪. ಮಿಶ್ರತಳಿ ಜೋಳ, ಒಣಗಿ ಹೋಗುತ್ತಿದೆ.

೫. ಭತ್ತ. ನುಗು ಅಚ್ಚುಕಟ್ಟು ಪ್ರದೇಶದಲ್ಲಿ ನಾಟಿಯಾಗಿರುವುದಿಲ್ಲ [illegible] ಅಚ್ಚುಕಟ್ಟು ಪ್ರದೇಶದಲ್ಲಿ ನಾಟಿಯಾಗಿದೆ.

೬. ದ್ವಿದಳ ದಾನ್ಯಗಳು, ಒಣಗಿ ಹೋಗುತ್ತಿದೆ.

೭. ಗೋದಿ, ಪರಿಪಕ್ವವಾಗಿಲ್ಲದ ಬೆಳೆಯಾಗಿದೆ.

ಆ) ಪ್ರಸ್ತುತ ವರ್ಷ ಸರ್ಕಾರವು ಬೆಳೆ ಕಳೆದುಕೊಂಡ ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ಪರ್ಯಾಯ ವ್ಯವಸ್ಥೆಯಾಗಿ ಕೃಷಿ ಸಾಮಗ್ರಿ ಭರಿತ ಚೀಲಗಳನ್ನು ವಿತರಿಸಲು ತೀರ್ಮಾನಿಸಿದೆ ಹಾಗೂ ಅದಕ್ಕಾಗಿ ಈಗಾಗಲೇ ಹಣ ಬಿಡುಗಡೆ ಮಾಡಿದೆ.